

ವಾಗೀಶ ಹೆಗಡೆ

# ಅಂತರಂಗದ ಶೋಧನೆಯಲ್ಲಿ ಅರಳಬೇಕಿದೆ

ಹಾಡುಗಳಿಗೆ ಅನೂಹ್ಯ ಶಕ್ತಿ ಇದೆ. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲೂ, ಭಾಷಾವಾರು ರಾಜ್ಯ ನಿರ್ಮಾಣಕ್ಕೂ ಪೂರ್ವದ ಅರುಣೋದಯದ ಸಂದರ್ಭದಲ್ಲೂ, ಕರ್ನಾಟಕ (ಆಗ ಮೈಸೂರು) ರಚನೆ ಯಾಗುವ ಹೊತ್ತಿನಲ್ಲೂ, ಅಷ್ಟೇ ಏಕೆ, ನಾವು ಕಾಲೇಜು ಓದುವ ದಿನಗಳಲ್ಲಿ ನಡೆದ ಗೋಕಾಕ್ ಚಳವಳಿಯ ಕಾಲ ದಲ್ಲೂ ರಾಷ್ಟ್ರ ಪ್ರೇಮದ, ನಾಡು – ನುಡಿಯ ಪ್ರೇಮದ ಗೀತೆಗಳು ಅಂತರಂಗದ ಪ್ರೇರಣೆಯಿಂದಲೂ, ಸಮೂಹದ ಅಂತರಂಗದ ಅಪೇಕ್ಷೆಯ ಫಲವಾಗಿಯೂ ಮೂಡಿಬಂದವು. ಜನರ ಆಶೋತ್ತರ, ಕನಸುಗಳನ್ನು ವ್ಯಕ್ತಪಡಿಸುವ ಶಕ್ತಿ ಇರುವ ಹಾಡುಗಳು ಸಮೂಹದ ಕಂಠದಿಂದ ಮೊಳಗತೊಡಗುತ್ತವೆ. ಬಾಂಗ್ಲಾ ಯುದ್ಧದ ಕಾಲಕ್ಕೆ ಪ್ರತಿ ದಿನವೂ ಸೈನಿಕರನ್ನು, ನಾಡಿನ ಜನರನ್ನು ಉದ್ದೀಪಿಸುವ ಹಾಡುಗಳು ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು ಎಂಬುದು ನನ್ನ ಬಾಲ್ಯದ ಇನ್ನೊಂದು ನೆನಪು. ದಲಿತ ಚಳವಳಿಯ ಒಳ ತುಡಿತಗಳನ್ನು ಹೇಳಿದ ಸಿದ್ದಲಿಂಗಯ್ಯನವರ ಗೀತೆಗಳೂ ನೆನಪಿಗೆ ಬರುತ್ತಿವೆ. ನಾಡಗೀತೆಗಳು ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು ವಿಶಿಷ್ಟ ರೀತಿಯಲ್ಲಿ ಒಗ್ಗೂಡಿಸಿ ತೋರುತ್ತವೆ. ಕುವೆಂಪು, ಬೇಂದ್ರೆ, ನಿಸಾರ್, ಕೆ.ಎಸ್.ನ, ಎಚ್ಚೆಸ್ವಿ, ಕಣವಿ... ಇವರೆಲ್ಲ ಮಾದರಿ ಎನ್ನಬಹುದಾದ ನಾಡಗೀತೆಗಳನ್ನು ಬರೆದಿದ್ದಾರೆ. ಇಂದು ನಾಡಗೀತೆ ಬರೆಯುವಂಥ ಬಹಿರಂಗದ ಸವಾಲುಗಳು ಅಷ್ಟಾಗಿ ಕಾಣುತ್ತಿಲ್ಲ. ಅಂತರಂಗದ ಶೋಧನೆಯಲ್ಲೇ ಅವು ಅರಳಬೇಕಾಗಿವೆ. ✿